# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40342/2016-17** **ದಿನಾಂಕ: 05.08.2016**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕ್ರಮವಾಗಿ **400** ಹಾಗೂ **5660** ಕಿರಿಯ ಮಾರ್ಗದಾಳು ಹುದ್ದೆಗಳನ್ನು ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ **61**-ಕಿರಿಯ ಸ್ಟೇಷನ್ ಪರಿಚಾರಕ ಬ್ಯಾಕ್‌ಲಾಗ್ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ **141**-ಕಿರಿಯ ಮಾರ್ಗದಾಳು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಕಿರಿಯ ಮಾರ್ಗದಾಳು ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಯಾವುದಾದರೂ ಒಂದು ಕಂಪನಿಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.**

## 1. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:

**ಹುದ್ದೆ: ಕಿರಿಯ ಮಾರ್ಗದಾಳು:**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 26 | 5 | 85 | 7 | 25 | 7 | 7 | 8 | **170** |
| ಗ್ರಾಮೀಣ ಮೀಸಲಾತಿ | 13 | 3 | 42 | 4 | 13 | 4 | 4 | 5 | **88** |
| ಮಾಜಿ ಸೈನಿಕ | 5 | 1 | 16 | 1 | 5 | 1 | 1 | 1 | **31** |
| ಕನ್ನಡ ಮಾಧ್ಯಮ ಅಭ್ಯರ್ಥಿ | 2 | – | 8 | 1 | 2 | 1 | – | 1 | **15** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 2 | – | 8 | – | 2 | – | – | – | **12** |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 3 | 1 | 9 | 1 | 3 | 1 | 1 | 1 | **20** |
| ಒಟ್ಟು | **51** | **10** | **168** | **14** | **50** | **14** | **13** | **16** | **336** |

**ಅನುಚ್ಛೇದ 371(ಜೆ) ರ ಅಡಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿ:**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 5 | 2 | 17 | 2 | 5 | 2 | 2 | 2 | **37** |
| ಗ್ರಾಮೀಣ ಮೀಸಲಾತಿ | 3 | – | 8 | 1 | 3 | 1 | – | – | **16** |
| ಮಾಜಿ ಸೈನಿಕ | 1 | – | 3 | – | 1 | – | – | – | **5** |
| ಕನ್ನಡ ಮಾಧ್ಯಮ ಅಭ್ಯರ್ಥಿ | – | – | 1 | – | – | – | – | – | **1** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | – | – | 1 | – | – | – | – | – | **1** |
| ವಿಕಲ ಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 1 | – | 2 | – | 1 | – | – | – | **4** |
| ಒಟ್ಟು | **10** | **2** | **32** | **3** | **10** | **3** | **2** | **2** | **64** |

## 2. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ:

**ಹುದ್ದೆ: ಕಿರಿಯ ಮಾರ್ಗದಾಳು:**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 190 | 39 | 630 | 51 | 189 | 51 | 50 | 63 | **1263** |
| ಗ್ರಾಮೀಣ ಮೀಸಲಾತಿ | 94 | 19 | 315 | 25 | 94 | 25 | 25 | 32 | **629** |
| ಮಾಜಿ ಸೈನಿಕ | 38 | 8 | 127 | 10 | 38 | 10 | 11 | 12 | **254** |
| ಕನ್ನಡ ಮಾಧ್ಯಮ ಅಭ್ಯರ್ಥಿ | 19 | 3 | 63 | 5 | 19 | 5 | 5 | 6 | **125** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 19 | 3 | 63 | 5 | 19 | 5 | 5 | 6 | **125** |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 19 | 4 | 63 | 5 | 19 | 5 | 5 | 7 | **127** |
| ಒಟ್ಟು | **379** | **76** | **1261** | **101** | **378** | **101** | **101** | **126** | **2523** |

ಅನುಚ್ಛೇದ 371(ಜೆ) ರ ಅಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | 1 | 8 | – | 2 | – | 1 | 1 | **15** |
| ಗ್ರಾಮೀಣ ಮೀಸಲಾತಿ | 1 | – | 3 | 1 | 1 | 1 | – | – | **7** |
| ಮಾಜಿ ಸೈನಿಕ | 1 | – | 2 | – | 1 | – | – | – | **4** |
| ವಿಕಲ ಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | – | – | 1 | – | – | – | – | – | **1** |
| **ಒಟ್ಟು** | **4** | **1** | **14** | **1** | **4** | **1** | **1** | **1** | **27** |

## 3. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ:

### ಹುದ್ದೆ: ಕಿರಿಯ ಮಾರ್ಗದಾಳು:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 106 | 21 | 351 | 29 | 106 | 29 | 29 | 35 | **706** |
| ಗ್ರಾಮೀಣ ಮೀಸಲಾತಿ | 52 | 10 | 176 | 14 | 52 | 13 | 13 | 17 | **347** |
| ಮಾಜಿ ಸೈನಿಕ | 21 | 4 | 70 | 6 | 21 | 6 | 6 | 7 | **141** |
| ಕನ್ನಡ ಮಾಧ್ಯಮ ಅಭ್ಯರ್ಥಿ | 11 | 2 | 35 | 2 | 11 | 2 | 2 | 4 | **69** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 11 | 2 | 35 | 2 | 11 | 3 | 3 | 4 | **71** |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 10 | 3 | 36 | 3 | 10 | 3 | 3 | 3 | **71** |
| **ಒಟ್ಟು** | **211** | **42** | **703** | **56** | **211** | **56** | **56** | **70** | **1405** |

## 4. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:

### ಹುದ್ದೆ: ಕಿರಿಯ ಮಾರ್ಗದಾಳು:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 128 | 25 | 426 | 34 | 127 | 35 | 35 | 42 | **852** |
| ಗ್ರಾಮೀಣ ಮೀಸಲಾತಿ | 63 | 13 | 213 | 17 | 63 | 17 | 16 | 22 | **424** |
| ಮಾಜಿ ಸೈನಿಕ | 26 | 5 | 86 | 7 | 26 | 7 | 7 | 8 | **172** |
| ಕನ್ನಡ ಮಾಧ್ಯಮ ಅಭ್ಯರ್ಥಿ | 13 | 3 | 43 | 3 | 13 | 3 | 3 | 4 | **85** |
| ಯೋಜನೆ ನಿರಾಶ್ರಿತ ಅಭ್ಯರ್ಥಿ | 13 | 3 | 43 | 4 | 13 | 4 | 4 | 4 | **88** |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 13 | 2 | 42 | 3 | 13 | 3 | 3 | 5 | **84** |
| **ಒಟ್ಟು** | **256** | **51** | **853** | **68** | **255** | **69** | **68** | **85** | **1705** |

## : ಬ್ಯಾಕ್‌ಲಾಗ್ ಹುದ್ದೆಗಳು :

## 5. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:

### ಹುದ್ದೆ: ಕಿರಿಯ ಸ್ಟೇಷನ್ ಪರಿಚಾರಕ:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | – | – | – | – | 1 | – | – | **3** |
| ಗ್ರಾಮೀಣ ಮೀಸಲಾತಿ | 1 | – | – | – | – | 1 | – | – | **2** |
| ಮಾಜಿ ಸೈನಿಕ | – | – | – | – | – | 2 | – | – | **2** |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 10 | 2 | 17 | 3 | 10 | 3 | 3 | 3 | **51** |
| **ಒಟ್ಟು** | **13** | **2** | **17** | **3** | **10** | **7** | **3** | **3** | **58** |

ಅನುಚ್ಛೇದ 371(ಜೆ) ರ ಅಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ವಿಕಲ ಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 1 | – | 1 | – | 1 | – | – | – | 3 |
| ಒಟ್ಟು | 1 | – | 1 | – | 1 | – | – | – | 3 |

## 6. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ:

ಹುದ್ದೆ: ಕಿರಿಯ ಮಾರ್ಗದಾಳು:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಗ್ರಾಮೀಣ ಮೀಸಲಾತಿ | – | – | – | – | – | 2 | – | – | 2 |
| ಮಾಜಿ ಸೈನಿಕ | – | – | 1 | – | – | 5 | – | – | 6 |
| ಕನ್ನಡ ಮಾಧ್ಯಮ ಅಭ್ಯರ್ಥಿ | – | – | – | – | – | 1 | – | – | 1 |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 10 | 2 | 5 | 3 | 10 | 3 | 3 | 3 | 39 |
| ಒಟ್ಟು | 10 | 2 | 6 | 3 | 10 | 11 | 3 | 3 | 48 |

ಅನುಚ್ಛೇದ 371(ಜೆ) ರ ಅಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | – | – | – | – | – | 1 | – | 2 |
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 1 | – | 1 | – | 1 | – | – | – | 3 |
| ಒಟ್ಟು | 2 | – | 1 | – | 1 | – | 1 | – | 5 |

## 7. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ:

ಹುದ್ದೆ: ಕಿರಿಯ ಮಾರ್ಗದಾಳು:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 11 | 2 | 9 | 3 | 10* | 3 | 3 | 4 | 45 |
| ಒಟ್ಟು | 11 | 2 | 9 | 3 | 10* | 3 | 3 | 4 | 45 |

*** Note: In WP NO: 206068 of 2015 (GM-RES), Hon'ble High Court of Karnataka, Kalaburgi Bench in its Order dated 04.11.2015 has given directions to KPTCL & HESCOM to; "To retain one post in the physically handicapped category to which the petitioner had made application". In compliance to this order, one post from Category II[A] - Physically Challenged Quota has been retained and 10 posts are to be notified out of 11 posts in respective quota.**

## 8. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:

ಹುದ್ದೆ: ಕಿರಿಯ ಮಾರ್ಗದಾಳು:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನ ಅಭ್ಯರ್ಥಿ (ಶ್ರವಣ ದೋಷ ಮಾತ್ರ) | 7 | 2 | 19 | 2 | 7 | 2 | 2 | 2 | 43 |
| ಒಟ್ಟು | 7 | 2 | 19 | 2 | 7 | 2 | 2 | 2 | 43 |

## ಹುದ್ದೆಗಳ ಭರ್ತಿ:

i) ಕಿರಿಯ ಮಾರ್ಗದಾಳು ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಯಾವುದಾದರೂ ಒಂದು ಕಂಪನಿಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದಾಗ್ಯೂ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಕಂಪನಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಅರ್ಜಿ ಶುಲ್ಕದೊಂದಿಗೆ ಸಲ್ಲಿಸಿದ ಮೊದಲನೇ ಅರ್ಹ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.

ii) ಕವಿಪ್ರನಿನಿಯಲ್ಲಿ ಕಿರಿಯ ಮಾರ್ಗದಾಳು ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಕವಿಪ್ರನಿನಿಯಲ್ಲಿನ ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಯ ಬ್ಯಾಕ್‌ಲಾಗ್ ಹುದ್ದೆಗಳಿಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

iii) ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಿರಿಯ ಮಾರ್ಗದಾಳು ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಆಯಾ ವಿದ್ಯುತ್ ಸರಬರಾಜು ಕಂಪನಿಗಳ ಕಿರಿಯ ಮಾರ್ಗದಾಳು ಹುದ್ದೆಯ ಬ್ಯಾಕ್‌ಲಾಗ್ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

iv) ಕವಿಪ್ರನಿನಿಯಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಅಥವಾ ಕಿರಿಯ ಮಾರ್ಗದಾಳು ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ರಾಜ್ಯಾದ್ಯಂತ ಕವಿಪ್ರನಿನಿಯ ಯಾವುದೇ ಕಚೇರಿಗಳಿಗೆ ಹಾಗೂ ಹೈದರಾಬಾದ್-ಕರ್ನಾಟಕ ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಕಚೇರಿಯ ವ್ಯಾಪ್ತಿಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು.

v) ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಿರಿಯ ಮಾರ್ಗದಾಳು ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ಅಧಿಕಾರ ವ್ಯಾಪ್ತಿಯಲ್ಲಿ ಸ್ಥಳ ನಿಯುಕ್ತಿಗೊಳಿಸಲಾಗುವುದು.

**vi) ಕಲಂ 371(ಜೆ) ರ (ಹೈದರಾಬಾದ್-ಕರ್ನಾಟಕ ಪ್ರದೇಶ) ಅನ್ವಯ ಮೀಸಲಾತಿ ಬಯಸುವ ಅಭ್ಯರ್ಥಿಗಳು, ಸದರಿ ಮೀಸಲಾತಿಗೆ ನಿಗದಿಪಡಿಸಿರುವ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆದಾಗ್ಯೂ ಅರ್ಜಿಯನ್ನು ಭರ್ತಿ ಮಾಡುವಾಗ ಮೀಸಲಾತಿ ಬಯಸುವ ಬಗ್ಗೆ ಮಾಹಿತಿಯನ್ನು ನೀಡುವುದು (ಅರ್ಜಿಯ ಕ್ರಮ ಸಂಖ್ಯೆ: 11 ರಲ್ಲಿ 'ಹೌದು/ಇಲ್ಲ' ಎಂದು ನಮೂದಿಸುವುದು).**

## 9. ಕ್ರೋಢೀಕೃತ ಸಂಭಾವನೆ:

ಅ) ಕ್ರೋಢೀಕೃತ ಸಂಭಾವನೆ (ಮೊದಲ 3 ವರ್ಷಗಳು):

1ನೇ ವರ್ಷ : ₹10,000/- ಮಾಸಿಕ
2ನೇ ವರ್ಷ : ₹11,000/- ಮಾಸಿಕ
3ನೇ ವರ್ಷ : ₹12,000/- ಮಾಸಿಕ

ಆ) ಆಯ್ಕೆಯಾದ ಅಭ್ಯರ್ಥಿಗಳನ್ನು ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳು ಹಾಗೂ ಸಂಬಂಧಪಟ್ಟ ಕಂಪನಿಗಳ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಅಧ್ಯಾಯ-1 ರ 6(1)(ಇ) ರಂತೆ ಕೆಲವು ಷರತ್ತುಗಳಿಗೊಳಪಟ್ಟು ಮೂರು (3) ವರ್ಷಗಳ ತರಬೇತಿಗೆ ಒಳಪಡಿಸಲಾಗುವುದು. ತರಬೇತಿಯ ಅವಧಿಯಲ್ಲಿ ಯಾವುದೇ ಇನ್ನಿತರೆ ಭತ್ಯೆ ಹಾಗೂ ಸೌಲಭ್ಯಗಳನ್ನು ನೀಡಲಾಗುವುದಿಲ್ಲ.

ಇ) ಮೂರು ವರ್ಷದ ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿದ ನಂತರ ಅಭ್ಯರ್ಥಿಗಳನ್ನು ವೇತನ ಶ್ರೇಣಿ ₹7350-150-8100-190-9050-240-10250-300-11750-360-15710 ರಲ್ಲಿ ಎರಡು (2) ವರ್ಷಗಳ ಕಾಲ ಪರೀಕ್ಷಾರ್ಥ ಅವಧಿಯಲ್ಲಿ ಇರಿಸಲಾಗುವುದು.

## 10. ಅಗತ್ಯ ವಿದ್ಯಾರ್ಹತೆ:

ಎಸ್.ಎಸ್.ಎಲ್.ಸಿ. ಅಥವಾ 10ನೇ ತರಗತಿಯ ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ವಿದ್ಯಾಸಂಸ್ಥೆಗಳಿಂದ ತೇರ್ಗಡೆ ಹೊಂದಿರಬೇಕು.

**ಸೂಚನೆ:** ಮೇಲೆ ತಿಳಿಸಲಾದ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೆ ಯಾವುದೇ ಸಮಾನಾಂತರ ವಿದ್ಯಾರ್ಹತೆಯನ್ನು (Equivalent Qualification) ಪರಿಗಣಿಸಲಾಗುವುದಿಲ್ಲ.

**ಇತರೆ ಅರ್ಹತೆಗಳು:**

i) ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು.

ii) ತೃಪ್ತಿಕರ ನೇತ್ರದೃಷ್ಟಿಯನ್ನು ಹೊಂದಿರಬೇಕು.

iii) ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು. ಕಠಿಣ ಕೆಲಸಗಳಾದ ಗುಂಡಿ ತೆಗೆಯುವುದು, ಗೋಪುರ ಅಥವಾ ಕಂಬ ಹತ್ತುವುದು, ಭಾರವಾದ ವಸ್ತುಗಳನ್ನು ಸಾಗಿಸುವುದು, ತಂತಿಗಳನ್ನು ಹಾಕುವುದು, ಕಂಬಗಳನ್ನು ಬದಲಾಯಿಸುವುದು, ಇತ್ಯಾದಿ ಕೆಲಸಕಾರ್ಯಗಳನ್ನು ನಿರ್ವಹಿಸಲು ತಯಾರಿರಬೇಕು ಮತ್ತು ಸಹನ ಶಕ್ತಿ ಪರೀಕ್ಷೆಯಲ್ಲಿ ಅರ್ಹತೆ ಗಳಿಸಬೇಕು.

## 11. ಅರ್ಹತೆ:

ಅರ್ಹತಾದಾಯಕ ಪರೀಕ್ಷೆಯಲ್ಲಿ ಕನಿಷ್ಟ ತೇರ್ಗಡೆ ಅಂಕಗಳನ್ನು ಪಡೆದಿರುವಂತಹ ಅಭ್ಯರ್ಥಿಗಳು ಮೇಲೆ ತಿಳಿಸಿರುವ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

## 12. ಆಯ್ಕೆ:

'ಸಹನ ಶಕ್ತಿ ಪರೀಕ್ಷೆ'ಯಲ್ಲಿ ಅರ್ಹತೆ ಹೊಂದಿದಲ್ಲಿ, ಎಸ್.ಎಸ್.ಎಲ್.ಸಿ ಅಥವಾ 10ನೇ ತರಗತಿಯ ಪರೀಕ್ಷೆಯ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಶ್ರೇಷ್ಟತೆ ಆಧಾರದ ಮೇಲೆ ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಪಾಲಿಸಿ ಆಯ್ಕೆ ಮಾಡಲಾಗುವುದು.

ಸಹನ ಶಕ್ತಿ ಪರೀಕ್ಷೆಗೆ ಈ ಕೆಳಗಿನ ಸ್ಪರ್ಧೆಗಳನ್ನು ನಿಗದಿಪಡಿಸಲಾಗಿದೆ. :

| | | | |
|---|---|---|---|
| ಅ) | 100 ಮೀಟರ್ ಓಟ | : | 14 ಸೆಕೆಂಡ್‌ಗಳು |
| ಆ) | ಸ್ಕಿಪ್ಪಿಂಗ್ | : | ಒಂದು ನಿಮಿಷಕ್ಕೆ 50 ಬಾರಿ |
| ಇ) | ಶಾಟ್‌ಪುಟ್ (12 ಪೌಂಡ್‌ಗಳು) | : | 8 ಮೀಟರ್ ಎಸೆತ (3 ಅವಕಾಶಗಳು) |
| ಈ) | ವಿದ್ಯುತ್ ಕಂಬ ಹತ್ತುವುದು | : | 8 ಮೀಟರ್ ಎತ್ತರ (ಕಡ್ಡಾಯ) |
| ಉ) | 800 ಮೀಟರ್ ಓಟ | : | 3 ನಿಮಿಷಗಳು |

**ವಿಶೇಷ ಸೂಚನೆ:**

1. **ಸಹನ ಶಕ್ತಿ ಪರೀಕ್ಷೆಯನ್ನು ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಏಕಕಾಲದಲ್ಲಿ ನಡೆಸಲಾಗುವುದು. ಸಹನ ಶಕ್ತಿ ಪರೀಕ್ಷೆಯನ್ನು ಅಭ್ಯರ್ಥಿಯು ಅರ್ಜಿ ಸಲ್ಲಿಸಿರುವ ಆಯಾ ಕಂಪನಿಯ ವ್ಯಾಪ್ತಿಯಲ್ಲಿ ನಡೆಸಲಾಗುವುದು.**
2. **ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಮಾರ್ಗದಾಳು ಹುದ್ದೆಗಳ ಕೆಲಸ ಕಾರ್ಯಗಳು ಕಠಿಣ ಹಾಗೂ ಅಪಾಯಕಾರಿಯಾಗಿದ್ದು, ಸದರಿ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಪರಸ್ಪರ ಸಂವಹನವು (Communication) ಅತ್ಯಾವಶ್ಯಕವಾಗಿರುತ್ತದೆ.**

**ಟಿಪ್ಪಣಿ:**

i) **ಸಹನ ಶಕ್ತಿಯ ಪರೀಕ್ಷೆಯ ಸ್ಪರ್ಧೆಗಳಿಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಲು ಕಡ್ಡಾಯವಾಗಿ ವಿದ್ಯುತ್ ಕಂಬವನ್ನು ಹತ್ತುವುದು (ಸ್ಪರ್ಧೆ ಸಂಖ್ಯೆ: ಈ) ಮತ್ತು ಇನ್ನುಳಿದ ಸ್ಪರ್ಧೆಗಳಲ್ಲಿ ಕನಿಷ್ಟ ಎರಡು ಸ್ಪರ್ಧೆಗಳಲ್ಲಿ ಅರ್ಹತೆಯನ್ನು ಹೊಂದಿರಬೇಕಿರುತ್ತದೆ.**

**ಸೂಚನೆ: ಕಂಬ ಹತ್ತುವ ಸ್ಪರ್ಧೆಗೆ ಬೇಕಾಗಿರುವ ಎಲ್ಲಾ ರೀತಿಯ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳಲಾಗಿರುತ್ತದೆ. ಆದಾಗ್ಯೂ ಅಭ್ಯರ್ಥಿಗಳು ತಮ್ಮ ಸ್ವಂತ ಹೊಣೆಯಿಂದಲೇ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರಿಂದ ಯಾವುದಾದರೂ ಅವಘಡಗಳು ಸಂಭವಿಸಿದಲ್ಲಿ, ಅಭ್ಯರ್ಥಿಗಳ ವೈದ್ಯಕೀಯ ವೆಚ್ಚವನ್ನು ನಿಗಮ/ಕಂಪನಿಯಿಂದ ಭರಿಸಲಾಗುವುದಿಲ್ಲ.**

ii) ಸಹನ ಶಕ್ತಿ ಪರೀಕ್ಷೆಯ ಸಮಯದಲ್ಲಿ ಅಭ್ಯರ್ಥಿಗಳು ಸರ್ಕಾರಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ನೀಡಲಾಗುವ ಶಾರೀರಿಕ ದಾರ್ಢ್ಯತೆ ಸಂಬಂಧ ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

iii) ಸಹನ ಶಕ್ತಿ ಪರೀಕ್ಷೆಗೆ ಅಭ್ಯರ್ಥಿಗಳನ್ನು ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಅರ್ಹತೆಯ ಆಧಾರದಲ್ಲಿ 1:5 ರ ಅನುಪಾತದಲ್ಲಿ ಕರೆಯಲಾಗುವುದು.

iv) ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ದಾಖಲಾತಿಗಳ ಪರಿಶೀಲನೆಯನ್ನು ಸಹನ ಶಕ್ತಿ ಪರೀಕ್ಷೆಯ ಸಂದರ್ಭದಲ್ಲಿ ಮಾಡಲಾಗುವುದು. ಸಹನ ಶಕ್ತಿ ಪರೀಕ್ಷೆಯ ಸಮಯಕ್ಕೆ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ 'ಸ್ವಯಂ ದೃಢೀಕೃತ ಪ್ರತಿ'ಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ಅಭ್ಯರ್ಥಿಯು ಮೂಲ ದಾಖಲಾತಿಗಳನ್ನು ಪರಿಶೀಲನೆಯ ಸಮಯದಲ್ಲಿ ಸಲ್ಲಿಸದಿದ್ದಲ್ಲಿ, ಸಹನ ಶಕ್ತಿ ಪರೀಕ್ಷೆಗೆ ಭಾಗವಹಿಸಲು ಅವಕಾಶವನ್ನು ನೀಡುವುದಿಲ್ಲ.

v) ಸಹನ ಶಕ್ತಿ ಪರೀಕ್ಷೆಯ ಸಂಭಾವ್ಯ ದಿನಾಂಕವನ್ನು ಆಯಾ ವಿದ್ಯುತ್ ಸರಬರಾಜು ಕಂಪನಿಗಳ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. www.bescom.org, www.hescom.co.in, www.cescmysore.org, www.kptcl.com

## 13. <u>ವಯೋಮಿತಿ:</u>

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಟ 18 ವರ್ಷ ತುಂಬಿದವರಾಗಿರಬೇಕು ಹಾಗೂ ಈ ಕೆಳಗಿನ ಗರಿಷ್ಟ ವಯೋಮಿತಿಯನ್ನು ಮೀರಿರಬಾರದು.

| | | | |
|---|---|---|---|
| 1. | ಸಾಮಾನ್ಯ ವರ್ಗದ ಅಭ್ಯರ್ಥಿಗಳು | : | 35 ವರ್ಷಗಳು |
| 2. | ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು | : | 38 ವರ್ಷಗಳು |
| 3. | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು | : | 40 ವರ್ಷಗಳು |

<u>ಟಿಪ್ಪಣಿ:</u>

ಅ) ಮಾಜಿ ಸೈನಿಕರಿಗೆ ಅವರು ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮೂರು ವರ್ಷಗಳಷ್ಟು ಸೇರಿಸಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಗರಿಷ್ಟ 45 ವರ್ಷಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದು.

ಆ) ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ (GVPs) (ಮೈಕ್ರೋ ಫೀಡರ್ ಫ್ರಾಂಚೈಸಿ) ವಯೋಮಿತಿಯಲ್ಲಿ ಗರಿಷ್ಟ 10 ವರ್ಷಗಳವರೆಗೆ ಸಡಿಲಿಕೆಯನ್ನು ನೀಡಲಾಗುವುದು.

**<u>ಸೂಚನೆ:</u> ಕವಿಪ್ರನಿನಿಗೆ ಅರ್ಜಿ ಸಲ್ಲಿಸಿದಲ್ಲಿ ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ (GVPs) (ಮೈಕ್ರೋ ಫೀಡರ್ ಫ್ರಾಂಚೈಸಿ) ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.**

## 14. <u>ಅರ್ಜಿ ಶುಲ್ಕ:</u>

a) ಸಾಮಾನ್ಯ ವರ್ಗ ಮತ್ತು ಪ್ರವರ್ಗ–1, 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ–**ರೂ.200/–** (ರೂಪಾಯಿ ಎರಡು ನೂರು ಮಾತ್ರ).

b) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ – **ರೂ.100/–** (ರೂಪಾಯಿ ಒಂದು ನೂರು ಮಾತ್ರ).

**<u>ಸೂಚನೆ:</u> ಶ್ರವಣ ದೋಷ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದಾಗ್ಯೂ ಸದರಿ ಅಂಗವಿಕಲತೆಯ ಬಗ್ಗೆ ಸಕ್ಷಮ ಪ್ರಾಧಿಕಾರಿಯವರು ನೀಡಿರುವ ವೈದ್ಯಕೀಯ ದೃಢೀಕರಣ/ಅಂಗವಿಕಲತೆಯ ದೃಢೀಕರಣ ಪತ್ರ ಮತ್ತು ಇತ್ತೀಚಿನ Audiology /Audiometry Test ವರದಿಯನ್ನು ಹಾಜರುಪಡಿಸಬೇಕಿರುತ್ತದೆ.**

## 15. <u>ಅರ್ಜಿ ಸಲ್ಲಿಸುವ ವಿಧಾನ:</u>

i) ಅರ್ಜಿಯನ್ನು ಕಡ್ಡಾಯವಾಗಿ ಸಂಬಂಧಪಟ್ಟ ಅಯಾ ವಿದ್ಯುತ್ ಸರಬರಾಜು ಕಂಪನಿಯ ವೆಬ್–ಸೈಟ್ ಅನ್ನು ಲಾಗ್ ಮಾಡುವುದರೊಂದಿಗೆ 'ಆನ್–ಲೈನ್' ಮೂಲಕ ಸಲ್ಲಿಸಬೇಕು. ಇತರೆ ಯಾವುದೇ ವಿಧಾನದಲ್ಲಿ ಅರ್ಜಿಗಳನ್ನು ಸಲ್ಲಿಸಲು **ಅವಕಾಶವಿರುವುದಿಲ್ಲ.**

<u>www.bescom.org</u>, <u>www.hescom.co.in</u>, <u>www.cescmysore.org</u>, <u>www.kptcl.com</u>

ii) ಅಭ್ಯರ್ಥಿಗಳು ಅರ್ಜಿಯನ್ನು 'ಆನ್‌ಲೈನ್' ಮುಖಾಂತರ ದಿನಾಂಕ: **08.08.2016 ರ ಮಧ್ಯಾಹ್ನ 3:00 ಗಂಟೆಯಿಂದ 25.08.2016 ರ ಸಂಜೆ 5:00 ಗಂಟೆಯವರೆವಿಗೂ** ಸಲ್ಲಿಸಬಹುದಾಗಿರುತ್ತದೆ.

iii) ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.

iv) ಒಂದು ವೇಳೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

v) ಅರ್ಜಿ ಶುಲ್ಕದ ನಮೂನೆಯನ್ನು ಕವಿಪ್ರನಿನಿ ಮತ್ತು ಆಯಾ ಕಂಪನಿಯ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಂಡು, ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಯಾವುದಾದರೂ ಅಂಚೆ ಕಚೇರಿಯ ಮುಖಾಂತರ ಪಾವತಿಸಬೇಕಿರುತ್ತದೆ. ಅರ್ಜಿ ಶುಲ್ಕದ ಜೊತೆಗೆ ರೂ.15/–ನ್ನು ಅಂಚೆ ಕಚೇರಿಯ ಸೇವಾ ಶುಲ್ಕವಾಗಿ ಪಾವತಿಸಬೇಕಿರುತ್ತದೆ.

vi) ಅರ್ಜಿ ಶುಲ್ಕವನ್ನು, ದಿನಾಂಕ: 08.08.2016 ರಿಂದ ದಿನಾಂಕ: 27.08.2016 ರವರೆಗೆ ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿರುವ ಯಾವುದಾದರೂ ಗಣಕೀಕೃತ ಅಂಚೆ ಕಚೇರಿಯಲ್ಲಿನ ವ್ಯವಹಾರದ ವೇಳೆಯಲ್ಲಿ ಪಾವತಿಸುವುದು.

vii) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ, ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಯಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.

viii) ಅರ್ಜಿ ಶುಲ್ಕ ಪಾವತಿಯು ಖಚಿತಗೊಂಡ ನಂತರವೇ ಅರ್ಜಿದಾರರು ತಾವು ಸಲ್ಲಿಸಿದ ಅರ್ಜಿಯ ಮುದ್ರಣದ ಪ್ರತಿಗಳನ್ನು 'ಆನ್-ಲೈನ್' ಮೂಲಕ ಪಡೆಯಲು ಅವಕಾಶವಿರುತ್ತದೆ.

ix) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸುವುದು.

x) 'ಆನ್-ಲೈನ್' ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಉಂಟಾದಲ್ಲಿ ಮತ್ತು ಇತರೆ ಸ್ಪಷ್ಟೀಕರಣಕ್ಕಾಗಿ ಈ ಕೆಳಕಂಡ ಸಂಬಂಧಪಟ್ಟ ಆಯಾ ಕಂಪನಿಯ ಸಹಾಯವಾಣಿಗೆ (HELP LINE) ಬೆಳಿಗ್ಗೆ 10:30 ರಿಂದ ಸಂಜೆ 5:00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯುವುದು.

| | | |
|---|---|---|
| **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ** | : | **080-22211527 EXT: 3789, 3872** |
| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ** | : | **080-22085061** |
| **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ** | : | **0836-2223865, 0836-2223867** |
| **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ** | : | **0821-2343384** |

xi) **ಅರ್ಜಿ ಶುಲ್ಕ ಪಾವತಿ ವಿಚಾರಣೆಗಾಗಿ:**

ಅಭ್ಯರ್ಥಿಗಳು ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ **www.karnatakapost.gov.in** ನಲ್ಲಿ ಅರ್ಜಿ ಶುಲ್ಕ ಪಾವತಿಸಿದ **48** ಗಂಟೆಗಳ ನಂತರ ದೃಢಪಡಿಸಿಕೊಳ್ಳಬಹುದಾಗಿದೆ. ಪಾವತಿ ಸಂದರ್ಭದಲ್ಲಿ ಯಾವುದೇ ಸ್ಪಷ್ಟೀಕರಣಕ್ಕಾಗಿ ಅಭ್ಯರ್ಥಿಗಳು ಅಂಚೆ ಕಚೇರಿ ಸಹಾಯವಾಣಿ ದೂರವಾಣಿ ಸಂಖ್ಯೆ: **080-22392668 (ಸೋಮವಾರದಿಂದ ಶುಕ್ರವಾರದವರೆಗೆ, ಸಮಯ 09:30 ರಿಂದ 06:00 ಗಂಟೆಯವರೆಗೆ)** ಸಂಪರ್ಕಿಸುವುದು.

## 16. ಸಾಮಾನ್ಯ ಸೂಚನೆಗಳು:

i) ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ನಿಗಮ/ಕಂಪನಿಯ ನೇಮಕಾತಿ ಪ್ರಾಧಿಕಾರದಿಂದ ನೇಮಕಾತಿ ಆದೇಶವನ್ನು ನೀಡಲಾಗುವುದು.

ii) ಭಾರತೀಯ ನಾಗರೀಕರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

iii) ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟರೆ ಅಥವಾ ಕೇಂದ್ರ ಲೋಕಸೇವಾ/ರಾಜ್ಯ ಲೋಕಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ/ಖಾಯಂ ಆಗಿ ತಡೆಹಿಡಿಯಲ್ಪಟ್ಟಿದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ನಿಗಮವು ಅಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹನೆಂದು ತೀರ್ಮಾನಿಸಿದಲ್ಲಿ ಮಾತ್ರ ನೇಮಕಾತಿಗೆ ಅರ್ಹನಾಗಿರುತ್ತಾನೆ.

iv) ಅಭ್ಯರ್ಥಿಗಳು ಅರ್ಜಿಯಲ್ಲಿ ಭರ್ತಿ ಮಾಡಿರುವ ವಿವರಗಳು ಅಂತಿಮವಾಗಿರುತ್ತದೆ. ಯಾವುದೇ ಸಂದರ್ಭದಲ್ಲೂ ವಿವರಗಳ ಬದಲಾವಣೆಗೆ ಅವಕಾಶವಿರುವುದಿಲ್ಲ. ಆದ್ದರಿಂದ ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ವಿವರಗಳ ಬಗ್ಗೆ ಸರಿಯಾಗಿ ಖಚಿತಪಡಿಸಿಕೊಳ್ಳುವುದು.

v) ಅರ್ಜಿಯಲ್ಲಿ ಸುಳ್ಳು ಮಾಹಿತಿಗಳನ್ನು ಒದಗಿಸಿ, ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸಲಾಗುವುದು.

vi) ಅರ್ಜಿಯಲ್ಲಿ ನೀಡುವ ಅಂಚೆ ವಿಳಾಸವು ಅಂತಿಮವಾಗಿದ್ದು, ಪತ್ರ ವ್ಯವಹಾರವನ್ನು ಅದೇ ವಿಳಾಸದೊಂದಿಗೆ ನಡೆಸಲಾಗುವುದು.

vii) ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

viii) ಅರ್ಜಿಗಳನ್ನು ಆನ್ ಲೈನ್ ನಲ್ಲಿ ಭರ್ತಿ ಮಾಡುವ ಪೂರ್ವದಲ್ಲಿ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆಯೊಂದಿಗೆ ಲಭ್ಯವಿರುವ ಸೂಚನೆಗಳನ್ನು ಗಮನಿಸತಕ್ಕದ್ದು.

ix) ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ಯಲ್ಲಿನ ಮೀಸಲಾತಿಗೆ ಹಾಗೂ ಸಮತಲ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳಲ್ಲಿನ ಮಾನದಂಡವನ್ನು ತಿಳಿದಿರತಕ್ಕದ್ದು.

x) ಅಭ್ಯರ್ಥಿಗಳ ಅರ್ಹತೆ ಕುರಿತು ಕಂಪನಿಯ ತೀರ್ಮಾನವೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರತಕ್ಕದ್ದು.

xi) ನೇಮಕಾತಿಗಾಗಿ ಯಾವುದೇ ವಿಧದ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.

xii) ಅಭ್ಯರ್ಥಿಗಳು ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಪರಿಶೀಲನೆಗಾಗಿ ದೃಢೀಕೃತ ಪ್ರತಿಗಳೊಂದಿಗೆ ಹಾಜರುಪಡಿಸತಕ್ಕದ್ದು.

xiii) ನೇಮಕಾತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳು **ಉಚಿತ ವಿದ್ಯುಚ್ಛಕ್ತಿ ಸರಬರಾಜು ಸೌಲಭ್ಯಕ್ಕೆ** ಅರ್ಹರಾಗಿರುವುದಿಲ್ಲ.

xiv) ನಿಗಮವು ಯಾವುದೇ ಹಂತದಲ್ಲಾದರೂ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಾಗೂ ಅಗತ್ಯವಿದ್ದಲ್ಲಿ ಹೊಸದಾಗಿ/ತಿದ್ದುಪಡಿ ಪ್ರಕಟಣೆ ನೀಡುವ ಹಕ್ಕನ್ನು ಕಾಯ್ದಿರಿಸಿದೆ.

xv) ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುವಾಗ ನೇಮಕಾತಿ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅವಕಾಶವಿರುವುದಿಲ್ಲ.

xvi) ಹಿಂದುಳಿದ ವರ್ಗದ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸಿ ಅದೇ ಪ್ರವರ್ಗದಡಿಯಲ್ಲಿ ಆಯ್ಕೆಯಾಗುವಂತಹ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗುವುದು.

xvii) ಸರ್ಕಾರದ ಆದೇಶ ಸಂಖ್ಯೆ: ಇಎನ್ 119 ಇಇಬಿ 2015, ದಿನಾಂಕ: 23.05.2015 ರಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಕಿರಿಯ ಮಾರ್ಗದಾಳು ಹುದ್ದೆಯ ನೇರ ನೇಮಕಾತಿಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮ, 1977 ರ ನಿಯಮ 9(1ಬಿ) ಯ 3ನೇ ಪರಂತುಕದನ್ವಯ ಮಹಿಳೆಯರಿಗೆ ನೀಡುವ ಸಮತಲ ಮೀಸಲಾತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ.

xviii) ಶ್ರವಣ ದೋಷದ ಅಂಗವಿಕಲತೆಯ ಕೋಟಾದಡಿಯಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು 'ಸಹನಾ ಶಕ್ತಿ ಪರೀಕ್ಷೆ' ಸಂದರ್ಭದಲ್ಲಿ ಸಂಬಂಧಪಟ್ಟ ವೈದ್ಯಕೀಯ ಪ್ರಾಧಿಕಾರಿಗಳು ನೀಡಿರುವ ದೃಢೀಕರಣ ಪತ್ರ ಮತ್ತು ಇತ್ತೀಚಿನ Audiology/Audiometry Test ವರದಿಯನ್ನು ಕಡ್ಡಾಯವಾಗಿ ಹಾಜರುಪಡಿಸುವುದು. ಆದಾಗ್ಯೂ ಅಭ್ಯರ್ಥಿಯನ್ನು ನೇಮಕಾತಿಗೂ ಮುನ್ನ ಸರ್ಕಾರಿ ವೈದ್ಯಾಧಿಕಾರಿಗಳಿಂದ ತಪಾಸಣೆಗೆ ಒಳಪಡಿಸಿ ಖಚಿತಪಡಿಸಿಕೊಳ್ಳಲಾಗುವುದು.

## 17. ಸಮತಲ ಮೀಸಲಾತಿ:

| | | |
|---|---|---|
| 1. | ಗ್ರಾಮೀಣ ಮೀಸಲಾತಿ | ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಸೇನೆನಿ 2005, ದಿನಾಂಕ: 10.08.2005 ರನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಅಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಬಯಸುವವರು ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮೀಸಲತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಮಾಡಿಸಿ ಪಡೆದಿಟ್ಟುಕೊಂಡು ಮೂಲ ದಾಖಲಾತಿ ಸಮಯದಲ್ಲಿ ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು (ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ). |
| 2. | ಕನ್ನಡ ಮಾಧ್ಯಮ ಅಭ್ಯರ್ಥಿಗಳು | ಕನ್ನಡ ಮಾಧ್ಯಮದಲ್ಲಿ ನಿರಂತರವಾಗಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವುದನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ನಿಗದಿತ ನಮೂನೆಯಲ್ಲಿ ದೃಢೀಕರಿಸಬೇಕು ಮತ್ತು ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ/ಜಿಲ್ಲಾ ಶಿಕ್ಷಣಾಧಿಕಾರಿ 'ಮೇಲು ಸಹಿ' ಮಾಡಿರಬೇಕು. |
| 3. | ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿಗಳು | ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 23 ಎಸ್ಆರ್ಆರ್ 99, ದಿನಾಂಕ: 23.11.2000 ರನ್ವಯ ಯೋಜನೆಗಳಿಂದ ನಿರಾಶ್ರಿತರಾದ (ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳು ಈ ಮೀಸಲಾತಿಗೆ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 44 ಸೇನೇನಿ, ದಿನಾಂಕ: 27.07.2001 ರಲ್ಲಿ ನಿಗದಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್ ರವರಿಂದ |

| | | |
|---|---|---|
| | | ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುವ ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸಿರುವ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳು ಯೋಜನಾ ನಿರಾಶ್ರಿತ ಮೀಸಲಾತಿಗೆ ಅನರ್ಹರಾಗಿರುತ್ತಾರೆ. |
| 4. | ಮಾಜಿ ಸೈನಿಕರು | ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ಪ್ರಮಾಣ ಪತ್ರ ಹೊಂದಿರಬೇಕು. |
| 5. | ಹೈದರಾಬಾದ್-ಕರ್ನಾಟಕ ಮೀಸಲಾತಿ | ಹೈದರಾಬಾದ್-ಕರ್ನಾಟಕ ವ್ಯಾಪ್ತಿಯಡಿಯಲ್ಲಿ [ಅನುಚ್ಛೇದ-371(ಜೆ)] ಮೀಸಲಾತಿ ಪಡೆಯಬಯಸುವ ಅಭ್ಯರ್ಥಿಗಳು, ಸರ್ಕಾರದ ಅಧಿಸೂಚನೆ-1 ಮತ್ತು 2 ಸಂಖ್ಯೆ: ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ: 29.01.2014 ರ ಅನ್ವಯ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ಆದೇಶ, 2013 ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸಬೇಕು. |
| 6. | ವಿಕಲಚೇತನ ಅಭ್ಯರ್ಥಿ | **"ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 ರ ಅನ್ವಯ ಶ್ರವಣದೋಷವುಳ್ಳವರು ಎಂದರೆ ಪರಸ್ಪರ ಮಾತನಾಡುವಂಥ ಸಂದರ್ಭದಲ್ಲಿ ಶಬ್ದ ತರಂಗವನ್ನು ಸರಿಯಾಗಿರುವ ಕಿವಿ ಗ್ರಹಿಸುವಾಗ ಅರವತ್ತು ಡೆಸಿಬಲ್ ಅಥವಾ ಅದಕ್ಕೂ ಹೆಚ್ಚು ಸಾಮರ್ಥ್ಯವನ್ನು ಕಳೆದುಕೊಂಡಿರುವುದು".**<br>ಶ್ರವಣದೋಷದ ಅಂಗವಿಕಲತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ವೈದ್ಯಕೀಯ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರ ಮತ್ತು ಇತ್ತೀಚಿನ Audiology/Audiometry Test ವರದಿಯನ್ನು ಹೊಂದಿರಬೇಕು. |

## 18. ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಯ ಕೆಲಸ ಮತ್ತು ಜವಾಬ್ದಾರಿಗಳು:

i) ವಿದ್ಯುತ್ ಗೋಪುರ ಹಾಗೂ ಕಂಬಗಳನ್ನು ಹತ್ತುವುದು, ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಗ್ರಿಗಳನ್ನು ಹೊರುವುದು, ಸ್ಟೇಷನ್‌ನ ಸ್ವಚ್ಛತೆ, ಕ್ಲೀನಿಂಗ್ ಯಾರ್ಡ್‌ನಲ್ಲಿರುವ ಕೇಬಲ್ ಉಪಕರಣಗಳ ಸ್ವಚ್ಛತೆ, ಟ್ರಾನ್ಸ್‌ಫಾರ್ಮರ್/ಸ್ಟೇಷನ್ ಆವರಣದಲ್ಲಿರುವ ಹುಲ್ಲುಗಳನ್ನು ಕತ್ತರಿಸುವುದು, ಜಿ.ಓ.ಎಸ್. ಕಾರ್ಯನಿರ್ವಹಣೆ, ಸೂಚನೆಯ ಮೇರೆಗೆ ಸಂಪರ್ಕ ಕಡಿತಗೊಳಿಸುವಿಕೆ, ಗ್ರೌಂಡ್ ಪಿಟ್‌ಗೆ ನೀರು ಹಾಯಿಸುವುದು, ಸ್ಟೇಷನ್‌ನ ಕಾರ್ಯನಿರ್ವಹಣೆಯ ಬಗ್ಗೆ ಪಾಳಿ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿಗಳಿಗೆ ಸಹಾಯ ಮಾಡುವುದು, ಅವಶ್ಯವಿದ್ದಲ್ಲಿ ಸಾಮಾನ್ಯ ಭಾರದ ವಸ್ತುಗಳನ್ನು ಹೊರುವುದು, ಟಿ&ಪಿ ಸಾಮಗ್ರಿಗಳ ನಿರ್ವಹಣೆ ಅಲ್ಲದೇ ಶಾಖೆಯ ಮುಖ್ಯಸ್ಥರು ನಿಗಮದ ಹಿತದೃಷ್ಟಿಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.

ii) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

## 19. ಕಿರಿಯ ಮಾರ್ಗದಾಳು ಹುದ್ದೆಯ ಕೆಲಸ ಮತ್ತು ಜವಾಬ್ದಾರಿಗಳು:

i) ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಗ್ರಿಗಳನ್ನು ಹೊರುವುದು, ಮಾರ್ಗಗಳ ತಪಾಸಣೆ, ಮಾರ್ಗಗಳ ನಿರ್ವಹಣೆಗಾಗಿ ಕಂಬಗಳನ್ನು ಹತ್ತಿ ಕಾರ್ಯನಿರ್ವಹಿಸುವುದು, ಸಾಧನ ಸಲಕರಣೆ ಮತ್ತು ಸ್ಥಾವರಗಳ ಸ್ವಚ್ಛತೆ, ಮಾರ್ಗದಾಳು/ಮಾರ್ಗಕರ್ಮಿ ರವರುಗಳು ನಿರ್ವಹಿಸುವ ಮಾರ್ಗಗಳ ನಿರ್ವಹಣೆ ಕಾರ್ಯದಲ್ಲಿ ಸಹಾಯ ಮಾಡುವುದು, ಫ್ಯೂಸ್ ಆಫ್ ಕಾಲ್ ಮತ್ತು ದೋಷಗಳನ್ನು ಕಂಡುಹಿಡಿದು ಸರಿಪಡಿಸುವುದು, ನಿರ್ವಹಣೆ, ಬ್ರೇಕ್‌ಡೌನ್ ಕಾರ್ಯಗಳಲ್ಲಿ ಹಾಜರಿದ್ದು ಸಹಾಯ ಮಾಡುವುದು ಮತ್ತು ರಿಲೇ ಟೆಸ್ಟಿಂಗ್ ವಿಭಾಗದ ಕೆಲಸ ಕಾರ್ಯಗಳಲ್ಲೂ ಸಹ ಸಹಾಯ ಮಾಡುವುದು. ಕ್ಯಾಂಪ್‌ಗಳಲ್ಲಿ ಕಾರ್ಯನಿರ್ವಹಿಸುವುದು ಹಾಗೂ ಪೂರಕ ದಾಖಲೆಗಳನ್ನು ನಿರ್ವಹಿಸುವುದು ಅಲ್ಲದೇ ಶಾಖೆಯ ಮುಖ್ಯಸ್ಥರು ಕಂಪನಿಯ ಹಿತದೃಷ್ಟಿಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.

ii) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**
**ಕವಿಪ್ರನಿನಿ**